ಪೀಠೋಪಕರಣಗಳಿಗೆ 1 ಲಕ್ಷ, ಔಷಧಿಗಳಿಗೆ 1 ಲಕ್ಷ ಹಾಗೂ ಗಣಕಯಂತ್ರ ಖರೀದಿಗೆ 50 ಸಾವಿರ ಆರ್ಥಿಕ ನೆರವು ನೀಡಲಾಗುತ್ತಿದೆ.

ಇ) ಹಾಲಿ ಜಾರಿಯಲ್ಲಿರುವ ವ್ಯವಸ್ಥೆಯಂತೆ, ರಾಜ್ಯದ ವಿವಿಧ ಹಂತದ ಆರೋಗ್ಯ ಸಂಸ್ಥೆಗಳಿಂದ ಅವರವರ ಬೇಡಿಕೆಗನುಗುಣವಾಗಿ ಸದ್ಯದಲ್ಲಿ ವಾರ್ಷಿಕ ಬೇಡಿಕೆ ಪಟ್ಟಿಯನ್ನು ಪಡೆಯಲಾಗುತ್ತದೆ. ಜಿಲ್ಲಾವಾರು ಬಂದ ಬೇಡಿಕೆಯನ್ನು ಕ್ರೋಢೀಕರಿಸಿ ರಾಜ್ಯಮಟ್ಟದ ಉನ್ನತ ಸಮಿತಿಗಳಾದ ಸ್ಟೇಟ್ ಥೆರಪಿಟಿಕ್ ಕಮಿಟಿ ಮತ್ತು ನೀಡ್‌ಅಸೆಸ್‌ಮೆಂಟ್ ಕಮಿಟಿಗಳ ಮುಂದೆ ಮಂಡಿಸಿ ಶಿಫಾರಸ್ಸು ಮಾಡಲ್ಪಟ್ಟ ಔಷಧಗಳು ಹಾಗೂ ಅವುಗಳ ಪ್ರಮಾಣಕ್ಕನುಗುಣವಾಗಿ ಟೆಂಡರ್ ಕರೆದು ಸರಬರಾಜುದಾರರಿಂದ ಖರೀದಿಸಿ ಜಿಲ್ಲಾ ಔಷಧ ಉಗ್ರಾಣಗಳ ಮೂಲಕ ಹಂತಹಂತವಾಗಿ ಔಷಧಿಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗುತ್ತಿದೆ.

ಹಿಂದುಳಿದ ವರ್ಗಗಳ ಆಯೋಗದ ಸಮಾಜ ಮುಖಿ ಯೋಜನೆ

546(1071); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದವರು ನಡೆಸಿದ ಸಮಗ್ರ ಜಾತಿ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ಪ್ರಗತಿಯ ವಿವರಗಳೇನು;

ಆ) ಆಯೋಗದವರು ಸದರಿ ಜಾತಿ ಜನಗಣತಿಯ ಸಮಗ್ರ ವಿವರಗಳನ್ನು ನೀಡಲು ಗೊತ್ತುಪಡಿಸಿರುವ ಕಾಲಮಿತಿ ಯಾವುದು; ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ಎಷ್ಟು ಪ್ರದೇಶಗಳಲ್ಲಿ ಗಣತಿ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆದಿಲ್ಲವೆಂಬ ದೂರುಗಳು ಬಂದಿವೆ; ಆ ಕುರಿತು ಕೈಗೊಂಡ ಕ್ರಮಗಳೇನು;

ಇ) ಹಿಂದುಳಿದ ವರ್ಗಗಳ ಆಯೋಗವು ನೀಡಿದ ವರದಿಗಳನ್ನು ಸರಕಾರವು ಅನುಮೋದಿಸಲು ಇರುವ ನೀತಿ ನಿಯಮಗಳೇನು; ಹಿಂದುಳಿದ ವರ್ಗಗಳ ಆಯೋಗದವರು ಇದುವರೆಗೂ ಸರಕಾರಕ್ಕೆ ಒಪ್ಪಿಸಿರುವ ಎಷ್ಟು ವರದಿಗಳು ಅನುಮೋದನೆಗಾಗಿ ಬಾಕಿ ಉಳಿದಿವೆ; ಆ ಕುರಿತಾದ ಮುಂದಿನ ಕ್ರಮಗಳೇನು?

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಮನೆ–ಮನೆ ಸಮೀಕ್ಷೆ ನಂತರ, ಮಾಹಿತಿ ಗಣಕೀಕರಣ ಕಾರ್ಯ ಪ್ರಗತಿಯಲ್ಲಿದೆ.

ಆ) ಸಮೀಕ್ಷೆ ವಿವರಗಳನ್ನು ಸಲ್ಲಿಸಲು ಕಾಲಮಿತಿ ನಿಗದಿಪಡಿಸಿರುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ, ಯಾವುದೇ ಪ್ರದೇಶದಲ್ಲಿ ಸಮೀಕ್ಷೆ ಸಮರ್ಪಕವಾಗಿ ನಡೆದಿಲ್ಲ ಎಂಬ ಬಗ್ಗೆ ಸಮೀಕ್ಷೆ ಮುಗಿಯುವುದರೊಳಗಾಗಿ ಬಂದಂತಹ ದೂರುಗಳನ್ನು ಪರಿಶೀಲಿಸಿ ಕ್ರಮವಹಿಸಲಾಗಿದೆ.

ಇ) ಸರ್ಕಾರದ ಸಚಿವಾಲಯ ಕಾರ್ಯವಿಧಾನವನ್ನು ಅನುಸರಿಸಿ, ಸರ್ಕಾರವು ಸೂಕ್ತ ನಿರ್ಧಾರ ಕೈಗೊಳ್ಳಲಿದೆ. ಆದರೆ, ಆಯೋಗವು ನೀಡಿದ ವರದಿಗಳನ್ನು ಸರ್ಕಾರವು ಸಾಮಾನ್ಯವಾಗಿ ಒಪ್ಪಿಕೊಳ್ಳುವುದು ನಿಯಮ. ಪ್ರಸ್ತುತ ಆಯೋಗ ಕಾರ್ಯರೂಪಕ್ಕೆ ಬಂದ ನಂತರ, ರಾಜ್ಯಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯ ಪೂರ್ಣಗೊಳಿಸಿದ್ದು (30.06.2015), ಸಮೀಕ್ಷೆಯ ಅಂಕಿಅಂಶಗಳು ಬಂದ ನಂತರ ವರದಿಗಳನ್ನು ಕಳುಹಿಸುವ ಕಾರ್ಯ ಪ್ರಾರಂಭವಾಗುತ್ತದೆ. ಇದಕ್ಕೂ ಹಿಂದಿನ ಆಯೋಗಗಳು ಸರ್ಕಾರಕ್ಕೆ ಸಲ್ಲಿಸಿರುವ ವರದಿಗಳು ಪರಿಶೀಲನೆಯಲ್ಲಿವೆ.